ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 23rd January 1969

The House met in the Assembly Chamber, Vidhana Soudha, Bangalore, at Twelve of the Clock.

Mr. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Sri M. NAGAPPA.—Sir, before I put my question, I request the Chair to have the Question Hour between 1 P.M. and 2 P.M. when all Members will be present.

Mr. SPEAKER.—The question Hour is between Twelve and One. Hon. Member may put his Question. We will take up questions which were held over yesterday.

M.S.R.T.C. Division and Divisional Workshop at Raichur

375. Sri M. NAGAPPA (Raichur).—

Will the Minister for Transport be pleased to state :—

(*a*) whether there is any scheme before Mysore State Road Transport Corporation to open a M.S.R.T.C. Division at Raichur with the Divisional Workshop;

(*b*) whether it is not a fact that every district headquarter except Raichur District is provided with the Divisional Office and Workshop;

(*c*) if so, the reasons for not opening such Division in Raichur District;

(*d*) whether it is a fact that there was a Divisional Office and Workshop in 1957-58 in Raichur but it was shifted to Gulbarga;

(*e*) whether they would assure that the Divisional Office with Workshop will be opened by the end of March 1969 at Raichur?

Sri H. C. BORIAH (Deputy Minister for Transport).—

(*a*) No.

(*b*) No.

(*c*) Does not arise in view of reply to clause (*b*) of the question.

(*d*) Yes.

(*e*) No.

ಶ್ರೀ ಎಂ. ನಾಗಪ್ಪ.—ರಾಯಚೂರಿನಲ್ಲಿ ಮೊದಲು ಡಿವಿಜನರ್ ಆಫೀಸ್ ಮತ್ತು ವರ್ಕ್ ಷಾಪ್ ಇತ್ತು. ಅವುಗಳನ್ನು ಈಗ ಗುಲ್ಬರ್ಗಕ್ಕೆ ವರ್ಗಾಯಿಸಲು ಸರಕಾರಣಗಳು ಏನಿತ್ತು ಎಂಬುದನ್ನು ಹೇಳುತ್ತೀರಾ ?

† ಶ್ರೀ ಎಚ್. ಸಿ. ಬೋರಯ್ಯ.—ಗುಲ್ಬರ್ಗದಲ್ಲಿ ಡಿವಿಜನರ್ ಆಫೀಸನ್ನು ತೆಗೆದಿದ್ದೇವೆ. ಡಿವಿಜನರ್ ಆಫೀಸ್ ಇರುವ ಕಡೆಯಲ್ಲಿ ಅಡ್ಮಿನಿಸ್ಟ್ರೇಟಿವ್ ಆಫೀಸ್ ಮತ್ತು ಸಂಬಂಧಪಟ್ಟ ವರ್ಕ್ ಷಾಪ್ ಇರಬೇಕಾಗುತ್ತದೆ. ಆದಕಾರಣ ರಾಯಚೂರಿನಿಂದ ಗುಲ್ಬರ್ಗಕ್ಕೆ ವರ್ಗಾಯಿಸಲಾಯಿತು.

ಶ್ರೀ ಎಂ. ನಾಗಪ್ಪ.—ರಾಯಚೂರಿನಿಂದ ಕೊಪ್ಪಳ ತಾಲ್ಲೂಕಿಗೆ 127 ಮೈಲಿಗಳ ರಾಂಗ್ ರೂಟ್ ಇರುವುದರಿಂದ ರಾಯಚೂರಿನಲ್ಲಿಯೇ ಒಂದು ಡಿವಿಜನರ್ ಆಫೀಸನ್ನು ಪ್ರಾರಂಭ ಮಾಡಲು ಸಾಧ್ಯವಿಲ್ಲವೇ ?

ಶ್ರೀ ಎಚ್. ಸಿ. ಬೋರಯ್ಯ.—ಡಿವಿಜನರ್ ಆಫೀಸ್ ಪ್ರಾರಂಭ ಮಾಡಬೇಕಾದರೆ ಕೆಲವು ಕಾರಣಗಳು ಇರುತ್ತವೆ. ಆಪರೇಷನಲ್ ಕನ್‌ವೀನಿಯನ್ಸ್ ಮತ್ತು ಬೆಟರ್ ಕಂಟ್ರೋಲ್ ಇರಬೇಕು ಇವೆರಡಕ್ಕೂ ಗುಲ್ಬರ್ಗ ಮಧ್ಯಪ್ರದೇಶವಾಗಿರುವುದರಿಂದ ಅಲ್ಲಿ ಡಿವಿಜನರ್ ಆಫೀಸನ್ನು ಮಾಡಿದ್ದೇವೆ.

ಶ್ರೀ ಎಂ. ನಾಗಪ್ಪ.—ಈಗ ಬಳ್ಳಾರಿಯಲ್ಲಿ ಒಂದು ಡಿವಿಜನರ್ ಆಫೀಸನ್ನು ಮಾಡಿದ್ದೀರಿ. ರಾಯಚೂರಿನ ಒಂದು ತಾಲ್ಲೂಕಿನಿಂದ ಇನ್ನೊಂದು ತಾಲ್ಲೂಕಿಗೆ ಹೋಗಬೇಕಾದರೆ 128 ಮೈಲಿಗಳಾಗುತ್ತವೆ. ಈ ರಾಂಗ್ ರೂಟ್‌ಗಳಲ್ಲಿ ಬಸ್‌ಗಳು ಕಾಲಕ್ಕೆ ಸರಿಯಾಗಿ ಓಡುತ್ತಿಲ್ಲ. ಸರಿಯಾದ ವ್ಯವಸ್ಥೆ ಇಲ್ಲ. ಆದಕಾರಣ ರಾಯಚೂರಿನಲ್ಲಿಯೂ ಒಂದು ಡಿವಿಜನರ್ ಆಫೀಸ್ ಮತ್ತು ಒಂದು ವರ್ಕ್‌ಷಾಪನ್ನು ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಈ ಪ್ರಶ್ನೆ ಯಾವಾಗ ಉದ್ಭವಿಸುತ್ತದೆಯೆಂದರೆ, ಕೊಪ್ಪರ್ ಭಾಗ ಮತ್ತು ಬದರ್ ಮಾರ್ಗಗಳನ್ನು ರಾಷ್ಟ್ರೀಕರಣ ಮಾಡಿದಮೇಲೆ. ಆ ಸಮಯದಲ್ಲಿ ರಾಯಚೂರಿನಲ್ಲಿ ಡಿವಿಜನರ್ ಆಫೀಸ್ ಮತ್ತು ವರ್ಕ್‌ಷಾಪನ್ನು ತೆಗೆಯಲು ಆಲೋಚನೆ ಮಾಡಲಾಗುತ್ತದೆ.

Shifting of Local Fund Dispensary

418. Sri V. L. SIVAPPA (Tiptur).—

Will the Minister for Health be pleased to state :—

(*a*) whether the Taluk Board, Tiptur, had requested by a resolution that the Local Fund Dispensary of Biligere be transferred and be situated at "Kuppal Village" in view of Biligere getting a Health Unit ;

(*b*) whether it has come to the notice of Government that no dispensary is given to Kuppal even though 2 years have lapsed after the Taluk Board made the request ;

(*c*) whether the Government would expedite the matter at least now ?

† Indicates that the speeches or remarks have not been revised by the member concerned.